**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ**

**ಮಾದರಿ ಪ್ರಶ್ನೆಪತ್ರಿಕೆ-(3)-2024-25**

**ವಿಷಯ- ಐಚ್ಛಿಕ ಕನ್ನಡ-(16)**

ತರಗತಿ -ದ್ವಿತೀಯ ಪಿಯುಸಿ　　　　ಒಟ್ಟು ಅಂಕಗಳು-80

ಸಮಯ-3 ಗಂಟೆ　　　　ಒಟ್ಟು ಪ್ರಶ್ನೆಗಳು 48

---

**ಸೂಚನೆ**:-ವಿಭಾಗ 'ಅ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

**ಅ-ವಿಭಾಗ**

**I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ.** **5x1-5**

1. ಈತನು ದೇಹದ ಅನಿತ್ಯತೆಗೆ ಚೋದ್ಯಪಟ್ಟನು.
   ಅ) ಇಂದ್ರದೇವ　ಆ) ನೀಲಾಂಜನೆ　ಇ) ಆದಿದೇವ　ಈ)ನಾಭಿರಾಜ
2. ಅರ್ಜುನನ್ನು ಪರೀಕ್ಷಿಸಲು ಬೇಡನ ವೇಷದಲ್ಲಿ ಇವನು ಬಂದನು.
   ಅ) ಬ್ರಹ್ಮ　ಆ) ವಿಷ್ಣು　ಇ) ಶಿವ　ಈ) ಇಂದ್ರ
3. ನಾಗಿಯ ಎದೆಗೆ ಗೇರುಹೂವಿನಂತೆ ಲಗ್ಗೆ ಇಟ್ಟಿದುದು ಇದು.
   ಅ) ಚೆಲುವು　ಆ) ಯೌವನ　ಇ) ಪ್ರೀತಿ　ಈ) ಭಯ
4. ಜೋಯಿಸರು ದೇಗುಲದ ಒಳಗೆ ಇವನನ್ನು ಸೇರಿಸುವುದಿಲ್ಲ.
   ಅ) ರೈತ　ಆ) ಪಾರ್ವ　ಇ) ಶಿವ　ಈ) ಜಲಗಾರ
5. ಜಲಗಾರ ನಾಟಕಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
   ಕ) ರೈತನು ಹೊಲದಲ್ಲಿ ದುಡಿಯುತ್ತಾನೆ. ಗುಡಿಯಲ್ಲಿ ದೇವರನ್ನು ಅರಸುತ್ತಾನೆ
   ಚ) ರೈತನು ಕಾಯಕದಲ್ಲಿ ಕೈಲಾಸ ಕಾಣುತ್ತಾನೆ.
   ಈ ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗೆ ನೀಡಿರುವ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
   ಅ) ಕ- ಸರಿ　ಚ) ತಪ್ಪು
   ಆ) ಕ- ತಪ್ಪು　ಚ) ತಪ್ಪು
   ಇ) ಕ- ಸರಿ　ಚ) ಸರಿ
   ಈ) ಕ- ತಪ್ಪು　ಚ) ಸರಿ

**II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿ ಮಾಡಿ** **5x1-5**

6. 'ತಿರೆ' ಪದದ ಅರ್ಥ______
7. 'ಶೃಂಗಾರ' ಪದದ ತದ್ಭವ ರೂಪ_____
8. 'ನಿರಾಧಾರ ' ಪದದ ವಿರುದ್ಧಾರ್ಥಕ ಪದ______
9. ದ್ವಿರುಕ್ತಿಗೆ ಇದು ಉದಾಹರಣೆ________
10. 'ಮಧುರಾಕಾರ' ಪದದ ಬಿಡಿಸಿ ಬರೆದ ರೂಪ_______
    (ಸಿಂಗಾರ,　ಭೂಮಿ,　ಬೆಂಕಿ,　ಬಿಟ್ಟುಬಿಟ್ಟು,　ಮಧುರ+ಆಕಾರ,　ಆಧಾರ)

**III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ** **5x1-5**

11.
| | |
|---|---|
| ಅ. ಕಪರ್ದಿ | -ಬೆಂಕಿ-ಅನಲ |
| ಆ. ಅಗ್ನಿ | -ಬಹಿರಂಗ |
| ಇ. ಬಗೆ | -ಬಿಜ್ಜೆ |
| ಈ. ಅಂತರಂಗ | - ಚಣ |
| ಉ. ವಿದ್ಯೆ | -ಶಿವ |
| | -ಮನಸು-ಯೋಚನೆ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **5x1-5**

12. ಪರಮ ತತ್ತ್ವಜ್ಞಾನ ಯಾರಿಗೆ ಇಲ್ಲ?
13. ಅಶನ-ವಸನಗಳು ಹೇಗೆ ಸಿಗುತ್ತವೆ?
14. ಯಾರನ್ನು ಹುತ್ತದ ಗೊದ್ದಕ್ಕೆ ಹೋಲಿಸಲಾಗಿದೆ?
15. ಜನಕೆ ಯಾವುದರ ಮಂಕು ಬಡಿದಿದೆ?
16. ಜಗದ ಪಾಪವನ್ನು ನುಂಗುವವರು ಯಾರು?

## ಆ-ವಿಭಾಗ

**V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **4x2-8**

17. ಸುರವಧುವಿನ ನೃತ್ಯವನ್ನು ನೋಡುತ್ತಿದ್ದ ರಾಜರುಗಳ ಮನಸ್ಥಿತಿ ಹೇಗಿತ್ತು?
18. ಕೋಪಗೊಂಡ ಶಿವನು ಅರ್ಜುನನನ್ನು ತುಳಿದಾಗ ಏನಾಯಿತು?
19. ಗಿರಿಜೆಯ ಪ್ರಶ್ನೆಗೆ ಶಿವನು ಏನೆಂದು ಉತ್ತರಿಸಿದನು?
20. ಮಾಯೆಯು ಕನಸಿನ ಬಗ್ಗೆ ಮಾತನಾಡಿದಾಗ ಅಲ್ಲಮನು ಕೊಡುವ ಉತ್ತರವೇನು?
21. ಸರ್ವಜ್ಞನ ಪ್ರಕಾರ ಪರಮಾತ್ಮನು ಎಲ್ಲೆಲ್ಲಿ ಇರುವನು?

**VI. ಕೆಳಗಿನ ನಾಲ್ಕು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **4x3-12**

22. ಸುರಕಾಮಿನಿ ರಂಗದೊಳದೃಶ್ಯಮಪ್ಪುದುಂ
23. ವನ್ಯಕಿರಾತನೆಂದು ಬಗೆದೆಚ್ಚೆನ್
24. ಮೃದುನುಡಿಯಿಂ ಲೋಕ ಪೂಜ್ಯತೆ
25. ಅಮೃತದ ಕೆನೆಯ ಸವಿದಂತೆ
26. ಸೇವಕರನು ಸ್ವೈರಣೆಗೊಂಡು ಸಂತವಿಸು

**VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ** **2x4-8**

27. ಕಿರಾತಾರ್ಜುನ ಕಥಾನಕದಲ್ಲಿ ಶಿವನು ಅರ್ಜುನನ ಅಹಂಕಾರವನ್ನು ಹೇಗೆ ಮಣಿಸುತ್ತಾನೆ?
28. ಗುಂಡಯ್ಯನ ಭಕ್ತಿಗೆ ಮೆಚ್ಚಿ ಶಿವ ಕುಣಿದ ಬಗೆಯನ್ನು ವಿವರಿಸಿ.
29. ಅಲ್ಲಮ ಮತ್ತು ಮಾಯೆಯ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿರಿ
30. 'ನೇಮದೊಳು ನೆಲಸುವುದು' ಪದ್ಯದ ಹಿನ್ನೆಲೆಯಲ್ಲಿ ಹೆಣ್ಣಿನ ಹಿರಿಮೆಯನ್ನು ವರ್ಣಿಸಿ.

**VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ** **1x4-4**

31. ಎನಿಸಿದ ನೀಳಾಂಜನೆ ಕ
ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆನಿಸುತ್ತೊಳಪೊಕ್ಕಳ್ ಭೋಂ
ಕೆನೆ ನಿಖಿಳ ಜನಾಂತರಂಗಮಂ ರಂಗಮುಮಂ

32. ಕೊಲ್ವುದು ಧರ್ಮವೇ ಕಳುವುದು ನೀತಿಯೆ
ಗೆಲ್ವುದೊಳ್ಳಿತೆ ಸಜ್ಜನರ
ಒಲ್ವುದೊಳ್ಳಿತೆ ಪರಸತಿಗೆ ಪಶ್ಚಿಮರಂಗ
ನಾಲ್ವರು ಮೆಚ್ಚಿದೆನಲ್ಕೆ

## ಇ-ವಿಭಾಗ

**IX. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **1x2-2**

33. 'ನಾಗಿಯ ಕಥೆ ' ಕಥನ ಕವನದಲ್ಲಿ ಕವಿ ಊರನ್ನು ಹೇಗೆ ವರ್ಣಿಸುತ್ತಾನೆ?
34. ಜಾತ್ರೆಯಲ್ಲಿ ಸೀರೆಯವನು ಏನೆಂದು ಕೂಗುತ್ತಿದ್ದ?

**X. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **1x4-4**

35. 'ನಾಗಿಯ ಕಥೆ ' ಕಥನ ಕವನದಲ್ಲಿ ನಾಗಿಯ ಸೌಂದರ್ಯವನ್ನು ಕವಿ ಹೇಗೆ ವರ್ಣಿಸುತ್ತಾನೆ?
36. 'ನಾಗಿಯ ಕಥೆ ' ಕಥನ ಕವನದಲ್ಲಿನ ಪ್ರಕೃತಿ ವರ್ಣನೆ ಕುರಿತು ಬರೆಯಿರಿ.

## ಈ-ವಿಭಾಗ

**XI. ಕೆಳಗಿನ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ** **2x2-4**

37. ಜಲಗಾರನ ಶಿವ ಎಲ್ಲಿದ್ದಾನೆ?
38. ಧರೆಗೆ ಎಲ್ಲಿಯವರೆಗೂ ಸುಖವಿಲ್ಲ?
39. ಊರ ತೋಟಿ ಮತ್ತು ಜಗದ ತೋಟಿಗಳಾರು?

**XII. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **2x3-6**

40. ದೂರದಲ್ಲಿಯೇ ನಿಂತು ಕೈಮುಗಿದು ಬಾ.
41. ಗುಡಿಗಳು ಪಾಪಿಗಳ ಭೋಗಿಗಳ ಗೂಡುಗಳು
42. ಸೋದರನೆ, ಶಿವನು ಶಾಸ್ತ್ರಿಗಳ ಶಿವನಲ್ಲ.

**XIII. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **1x4-4**

43. ಲೋಕ ನಗಬೇಕಾದರಾರಾದರಳಬೇಕು- ಈ ಮಾತಿನ ಔಚಿತ್ಯವನ್ನು ಚರ್ಚಿಸಿ
44. ಶಿವನ ಆಭರಣಗಳ ಕುರಿತು ಶಿವನ ಅಭಿಪ್ರಾಯವನ್ನು ಬರೆಯಿರಿ.

**ಉ-ವಿಭಾಗ**

**XIV. ಕೆಳಗಿನ ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ 1x4-4**

45. ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮದ
ಕತ್ತಲೆಗೆ ಸಿಲುಕುವರ ಸೀಮೆಯ ಹೊಲಬು ತಾನಲ್ಲ
ಹೊತ್ತು ಹೋಗದ ಪುಂಡರಾಲಿಪ
ಮತ್ತಮತಿಗಳ ಗೋಷ್ಠಿಯಲ್ಲಿದು
ಸತ್ಯಶರಣರು ತಿಳಿವುದೀ ಪ್ರಭುಲಿಂಗ ಲೀಲೆಯನು

46. ಸಿರಿ ಬಂದ ಕಾಲಕ್ಕೆ ತಿಳಿದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು ಕೈಲಾಸ
ನೆರೆಮನೆಯಕ್ಕು ಸರ್ವಜ್ಞ

**XV. ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ.** **1x4-4**

47. ವಚನದಿಂದಿಹಪರ ಸುಖ ಸಂಪತ್ತುಗಳ್
ವಚನದೊಳತಿ ವಿಭವತ್ವ
ವಚನದಿಂ ದೈವದ ಗತಿ ದುರ್ಗತಿಯಕ್ಕು
ವಚನಾಮೃತದಿ ರಂಗ ತಣಿವು

48. ಆತ ಉಂಡ ಮನೆಗೆ ಕೇಡು ಬಗೆದ ; ಕೃತಘ್ನರು ಏನನ್ನು ತಾನೆ ಮಾಡರು?

---